# ಪ. ಘಟ್ಟದ ಜಲಮೂಲಗಳ ರಕ್ಷಣೆಗೆ ವಿಶೇಷ ಯೋಜನೆ ರೂಪಿಸಲು ಕೆರೆ ಸಮ್ಮೇಳನ ಆಗ್ರಹ

ಶಿರಸಿ, ನ.15: ತಾಲೂಕಿನ ಸ್ವರ್ಣವಲ್ಲಿಯಲ್ಲಿ ನಡೆದ, 'ಪಶ್ಚಿಮಘಟ್ಟದ ಕೆರೆಗಳು-ಜಲಮೂಲಗಳು: ಸಂರಕ್ಷಣೆ-ನಿರ್ವಹಣೆ' ಕುರಿತಾದ ಕೆರೆಸಮ್ಮೇಳನವು ಪಶ್ಚಿಮ ಘಟ್ಟದ ಜಲಮೂಲಗಳ ಸಂರಕ್ಷಣೆಗೆ ರಾಜ್ಯ ಸರ್ಕಾರ ವಿಶೇಷ ಯೋಜನೆ ರೂಪಿಸಬೇಕು; ಶಾಲಾ-ಕಾಲೇಜು ವಿದ್ಯಾರ್ಥಿಗಳ ಪಠ್ಯೇತರ ಚಟುವಟಿಕೆಗಳ ಭಾಗವಾಗಿ ಅದರಿಂದಲೇ ಕೆರೆಗಳ ಅಧ್ಯಯನ ನಡೆಸಲು ವಿಶೇಷ ಕಾರ್ಯಕ್ರಮವನ್ನು ಶಿಕ್ಷಣ ಇಲಾಖೆಗೆ ರೂಪಿಸಿ ಅಳವಡಿಸಬೇಕು ಎಂದು ಆಗ್ರಹಿಸುವುದರೊಟ್ಟಿಗೆ ಮಹತ್ವದ ಹದಿನೈದು ನಿರ್ಣಯಗಳನ್ನು ಕೈಗೊಂಡಿದೆ.

ಪಶ್ಚಿಮಘಟ್ಟಗಳ ಕೆರೆಗಳ ಜಲಾನಯನ ಪ್ರದೇಶದಲ್ಲಿ ಇರುವ ಅರಣ್ಯಗಳ ರಕ್ಷಣೆಗೆ ಹಾಗೂ ವನೀಕರಣಕ್ಕೆ ವಿಶೇಷ ಯೋಜನೆಯನ್ನು ಅರಣ್ಯ ಇಲಾಖೆ ರೂಪಿಸಬೇಕು; ಭಾರತ ಸರ್ಕಾರದ ಸ್ವಚ್ಛತಾ ಅಭಿಯಾನದ ವ್ಯಾಪ್ತಿಯಲ್ಲಿ ಕೆರೆ ಸ್ವಚ್ಛತೆಗೆ ವಿಶೇಷ ಆದ್ಯತೆ ನೀಡುವಂತೆ ಆಗಬೇಕು. ಸ್ಥಾನಿಕ ಸಂಘ-ಸಂಸ್ಥೆಗಳು ಕೆರೆ ಸ್ವಚ್ಛತಾ ಅಭಿಯಾನ, ಕೆರೆ ಉತ್ಸವ, ಕೆರೆ ಹಬ್ಬ ಮುಂತಾದ ವ್ಯಾಪಕ ರಚನಾತ್ಮಕ ಜನಾಂದೋಲನಗಳನ್ನು ಕೈಗೊಳ್ಳಬೇಕು; ಸ್ಥಾಪಿತ ಹಿತಾಸಕ್ತಿಗಳಿಂದ ಆಗಿರುವ ಕೆರೆ ಅತಿಕ್ರಮಣ ತೆರವುಗೊಳಿಸಲು ಕಟ್ಟುನಿಟ್ಟಿನ ಕ್ರಮ ಆಗಬೇಕು; ಮಲೆನಾಡಿನ ಕೆರೆಗಳಲ್ಲಿ ತುಂಬಿರುವ ಹೂಳು ತೆಗೆಯಲು ಸ್ಥಾನೀಯ ಪ್ರಯತ್ನಗಳು ಹೆಚ್ಚಾಗಬೇಕು; ದೇವಸ್ಥಾನ ಪುಷ್ಕರಣಿ, ಪುಣ್ಯ ತೀರ್ಥಗಳ ಉತ್ತಮ ನಿರ್ವಹಣೆಗೆ, ರಕ್ಷಣೆಗೆ ದೇವಾಲಯ ಆಡಳಿತ ಮಂಡಳಿಗಳು ಮುಂದಾಗಬೇಕು; ಕಪ್ಪತಗುಡ್ಡ, ಹೊಗ್ರೆಕಾನಗಿರಿ, ಕೊಡಚಾದ್ರಿಗಳಂಥ ಅಕ್ಷಯ ಜಲಪಾತ್ರೆಗಳನ್ನು ಬರಿದು ಮಾಡುವ ಬೃಹತ್ ಗಣಿಗಾರಿಕೆಗೆ ಸರ್ಕಾರ ಅವಕಾಶ ನೀಡಬಾರದು; ರಾಜ್ಯದಲ್ಲಿರುವ ಗ್ರಾಮ ಮಟ್ಟದ ಕೆರೆ ಅಭಿವೃದ್ಧಿ ಸಂಘಗಳನ್ನು ಸರ್ಕಾರ ಸಕ್ರಿಯಗೊಳಿಸಿ ಬಲಗೊಳಿಸಬೇಕು. ಗ್ರಾಮ ಅರಣ್ಯ ಸಮಿತಿಗಳ ಮೂಲಕ ಕೆರೆಗಳ ಸಂರಕ್ಷಣೆಗೆ ಹಾಗೂ ಅಭಿವೃದ್ಧಿಗೆ ಅರಣ್ಯ ಇಲಾಖೆ ಯೋಜನೆ ರೂಪಿಸಬೇಕು; ದೇವರಕಾಡು, ರಾಮಪತ್ರೆಜಡ್ಡಿಗಳಂಥ ಜೌಗು ಭೂಮಿಗಳನ್ನು ಸೂಕ್ಷ್ಮ ಪ್ರದೇಶ ಎಂದು ಗುರುತಿಸಿ ರಕ್ಷಿಸಬೇಕು; ಕೆರೆ ವ್ಯಾಪ್ತಿ ಮಿತಿಯನ್ನು ಸಡಿಲಗೊಳಿಸಿ ಮಲೆನಾಡಿನ ಅತಿಚಿಕ್ಕ ಕೆರೆಗಳನ್ನು ಸಂರಕ್ಷಣೆ ಮಾಡಲು ಕ್ರಮ ಜರುಗಿಸಬೇಕು; ಕೆರೆ ಪ್ರಾಧಿಕಾರ, ಜಲಾನಯನ ಇಲಾಖೆ, ಜಿಲ್ಲಾ ಪಂಚಾಯತ, ಜಲಸಂವರ್ಧನಾ ಸಂಸ್ಥೆ ಮುಂತಾದ ಸರ್ಕಾರದ ಇಲಾಖೆಗಳಲ್ಲಿ ಕೆರೆ ಅಭಿವೃದ್ಧಿ ಬಗ್ಗೆ ಸಮನ್ವಯ ಸಾಧಿಸಲು ಏಕ ಗವಾಕ್ಷಿ ಯೋಜನೆ ಜಾರಿಗೊಳಿಸಬೇಕು; ಪಟ್ಟಣಗಳ ತ್ಯಾಜ್ಯಗಳನ್ನು ಕೆರೆಗಳಿಗೆ ತುಂಬಿ ಕೆರೆ ನಾಶ ಮಾಡುವ ಕುಪ್ರವೃತ್ತಿ ಕಾನೂನುಬಾಹಿರ ಚಟುವಟಿಕೆ ತಡೆಗೆ ಕಠಿಣ ಕ್ರಮ ಕೈಗೊಳ್ಳಬೇಕು; ಪಶ್ಚಿಮಘಟ್ಟದಲ್ಲಿನ ನೀರಾವರಿ ಯೋಜನೆಗಳ ದಕ್ಷತೆ ನಿರ್ವಹಣೆ ವ್ಯವಸ್ಥಿತಗೊಳಿಸಬೇಕು ಹಾಗೂ ಇಲ್ಲಿನ ನದಿಗಳನ್ನು ತಿರುಗಿಸುವ ಹಾಗೂ ಜಲವಿದ್ಯುತ್ ಯೋಜನೆಗಳನ್ನು ನಿರ್ಮಾಣ ಮಾಡುವ ಹೊಸ ಯೋಜನೆಗಳ ಜಾರಿ ಬಗ್ಗೆ ಪುನರ್‌ವಿಮರ್ಶೆ ಆಗಬೇಕು; ಪಶ್ಚಿಮಘಟ್ಟದ ಜಲಮೂಲಗಳು, ಕೆರೆಗಳು, ಹಳ್ಳಗಳು ಅತಿಯಾದ ಕ್ರಿಮಿನಾಶಕ ಬಳಕೆಯಿಂದ ತೀವ್ರವಾಗಿ ಮಾಲಿನ್ಯಕ್ಕೆ ಒಳಗಾಗುತ್ತಿದ್ದು, ಸರ್ಕಾರ ಮಲೆನಾಡಿನಲ್ಲಿ ಅತಿಯಾದ ಕ್ರಿಮಿನಾಶಕ ಬಳಕೆಗೆ ಕಡಿವಾಣ ಹಾಕಬೇಕು ಎಂದು ಒಕ್ಕೊರಲಿನ ನಿರ್ಣಯ ಕೈಗೊಳ್ಳಲಾಗಿದೆ.